



ಭಾರತದ ಅಧಿಕಾರಿಗಳಿಗೆ ಸಮಜಾಯಿಷಿ ನೀಡಿದ್ದರು. ವಿಚಾರಣೆ ತೀವ್ರಗೊಳಿಸಿದಾಗ ತಪ್ಪೊಪ್ಪಿಕೊಂಡಿದ್ದು ವರದಿಯಾಗಿತ್ತು.

2010ರಲ್ಲಿ ಇಸ್ಲಾಮಾಬಾದ್‌ನಲ್ಲಿರುವ ಭಾರತೀಯ ದೂತವಾಸ ಕಚೇರಿಯ ಮಾಧ್ಯಮ ಹಾಗೂ ಮಾಹಿತಿ ಅಧಿಕಾರಿ ಮಾಧುರಿ ಗುಪ್ತಾ ಅವರ ಬಂಧನವಾಗಿತ್ತು. ಪಾಕಿಸ್ತಾನದ ಕುರಿತು ಭಾರತಕ್ಕೆ ಮಾಹಿತಿ ನೀಡಬೇಕಾದ ಮಾಧುರಿ, ಭಾರತದ ಮಾಹಿತಿಯನ್ನು ಅಲ್ಲಿನ ಐಎಸ್‌ಐಗೆ ರವಾನಿಸುತ್ತಿದ್ದರು. 30 ವರ್ಷಗಳ ರಾಜತಾಂತ್ರಿಕ ಅಧಿಕಾರಿಯಾಗಿ ಕೆಲಸ ಮಾಡಿದ್ದ ಮಾಧುರಿ, ರಾಣಾ ಎಂಬ ವ್ಯಕ್ತಿಯ ಮೋಹಪಾಶಕ್ಕೆ ಸಿಲುಕಿದ್ದರು. ಆತ ಪಾಕಿಸ್ತಾನದ ಬೇಹುಗಾರಿಕೆ ಸಂಸ್ಥೆ ಐಎಸ್‌ಐನ ಅಧಿಕಾರಿಯಾಗಿದ್ದ. ಭಾರತದ ರಹಸ್ಯ ಮಾಹಿತಿಗಳನ್ನು ಮಾಧುರಿಯಿಂದ ಉಪಾಯದಿಂದ ಪಡೆದಿದ್ದ. ಈ ಅಪರಾಧಕ್ಕಾಗಿ ಮಾಧುರಿ ಅವರಿಗೆ ಮೂರು ವರ್ಷಗಳ ಜೈಲು ಶಿಕ್ಷೆಯೂ ಆಗಿತ್ತು.

ದೇಶ ವಿದೇಶಗಳ ಮಾತಿರಲಿ, ಕರ್ನಾಟಕದಲ್ಲೇ 'ಹನಿ ಟ್ರ್ಯಾಪ್'ನ ಘಟನೆಗಳು ಸಾಕಷ್ಟು ನಡೆದಿವೆ. ಕೆಲವು ಬಯಲಿಗೆ ಬಂದಿವೆ, ಪೊಲೀಸ್ ಕಡತಗಳಲ್ಲಿ ದಾಖಲಾಗಿವೆ. ಇನ್ನೂ ಕೆಲವು ವ್ಯವಹಾರದಲ್ಲೇ ಕೊನೆಗೊಂಡಿವೆ.

ಇತ್ತೀಚೆಗೆ ಮಾಜಿ ಶಿಕ್ಷಕಿಯೊಬ್ಬರು ವಿವಾಹಾಕಾಂಕ್ಷಿಗಳನ್ನೇ ಗುರಿಯಾಗಿಸಿಕೊಂಡು 'ಹನಿ ಟ್ರ್ಯಾಪ್' ನಡೆಸಿರುವ ಪ್ರಕರಣ ಬೆಳಕಿಗೆ ಬಂದಿತ್ತು. ವೈವಾಹಿಕ ವೆಬ್‌ಸೈಟ್ ಮೂಲಕ ಅವಿವಾಹಿತರು, ವಿಚ್ಛೇದಿತರನ್ನೇ ಗುರಿಯಾಗಿಸಿಕೊಂಡು ಅವರ ಪರಿಚಯ ಮಾಡಿಕೊಂಡು ಹಸಿಬಿಸಿ ಮಾತಿನ ಮೂಲಕ ಗಾಳ ಹಾಕುತ್ತಿದ್ದ ಮಹಿಳೆ, ನಂತರ ತಮ್ಮ ಖಾಸಗಿಕ್ಷಣಗಳನ್ನು ಮೊಬೈಲ್‌ನಲ್ಲಿ ದಾಖಲಿಸುತ್ತಿದ್ದಳು. ನಂತರ ಅದನ್ನು ಬಹಿರಂಗಗೊಳಿಸುವ ಬೆದರಿಕೆಯೊಡ್ಡಿ ಹಣ ಲಪಟಾಯಿಸುತ್ತಿದ್ದಳು. ಚಿಕ್ಕಮಗಳೂರಿನ ಲಿಂಗದಹಳ್ಳಿ ಠಾಣೆಯಿಂದ ಹಿಡಿದು ಬೆಂಗಳೂರಿನವರೆಗೂ ಆಕೆಯ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು. ಮ್ಯಾಟ್ರಿಮೊನಿ ಸೈಟ್‌ಗಳನ್ನೇ ತನ್ನ ವಂಚನೆಗೆ ಜಾಲವಾಗಿ ಬಳಸಿಕೊಂಡ ಆಕೆಯಿಂದ ಮೋಸ ಹೋದವರ ಸಂಖ್ಯೆ 50ರಿಂದ 60 ಮಂದಿ ಎನ್ನುವುದು ಪೊಲೀಸರ ವಿಚಾರಣೆಯಿಂದ ಹೊರಬಂದಿದೆ.

ಬೆಂಗಳೂರು ಮಾತ್ರವಲ್ಲ, ಕರಾವಳಿ ಭಾಗದಲ್ಲೂ 'ಹನಿ ಟ್ರ್ಯಾಪ್'ನ ಬಹಳಷ್ಟು ಪ್ರಕರಣಗಳು ಇತ್ತೀಚೆಗೆ ವರದಿಯಾಗಿವೆ. ಕೇರಳ ಮೂಲದ ಯುವಕನಿಗೆ ಮಂಗಳೂರಿನ ಇಬ್ಬರು ಯುವತಿಯರನ್ನು ಮುಂದಿಟ್ಟುಕೊಂಡು ಹಣ ಮಾಡಲು ಯತ್ನಿಸಿ, ನಂತರ ಪೊಲೀಸರ ಅತಿಥಿಯಾದ ಗುಂಪೊಂದರ ಪ್ರಕರಣ ಇತ್ತೀಚೆಗೆ ಭಾರೀ ಸುದ್ದಿಯಾಗಿತ್ತು. ಸುರತ್ಕಲ್ ವ್ಯಾಪ್ತಿಯಲ್ಲಿ ನಡೆದ ಈ ಪ್ರಕರಣದಲ್ಲಿ, ಯುವತಿಯರನ್ನು ಮುಂದಿಟ್ಟುಕೊಂಡು ಕೇರಳ ಮೂಲದ ಯುವಕನಿಗೆ ಗಾಳ ಬೀಸಲಾಗಿತ್ತು. ಆತನನ್ನು ತಮ್ಮ ಸ್ಥಳಕ್ಕೆ ಕರೆಯಿಸಿಕೊಂಡು ವಿವಸ್ತ್ರಗೊಳಿಸಿ ಚಿತ್ರೀಕರಿಸಿ ₹ 5ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ಆತನ ಬಳಿ ಅಷ್ಟು ಹಣ ಇಲ್ಲದ್ದನ್ನು ಮನಗಂಡ ತಂಡ, ಆತನ ಕಾರನ್ನೇ ಒತ್ತೆಯಾಗಿಟ್ಟುಕೊಂಡಿದ್ದರು. ಪ್ರಕರಣ ಪೊಲೀಸ್ ಠಾಣೆ ಮೆಟ್ಟಿಲೇರುತ್ತಿದ್ದಂತೆ ಆ ತಂಡ ಕಂಬಿ ಎಣಿಸುವಂತಾಯಿತು.

ಈ ಮೊದಲು ಹಣವುಳ್ಳ ಶ್ರೀಮಂತರು ಮಾತ್ರ